ದಿ: ೨೨.೦೩.೨೦೨೨ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ವಾದಿ ಪರ ಶ್ರೀ ಎ.ಜಿ.ಎನ್ ವಕೀಲರಿಂದ,

ನಾನು ಹತ್ತನೇ ತರಗತಿ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆಂಗ್ಲ ಭಾಷೆ ಬರುವುದಿಲ್ಲ. ವಾದಿಯು ವಿಭಾಗ ಕೋರಿ ದಾವೆ ಸಲ್ಲಿಸಿದ್ದಾರೆ. ಈ ದಾವೆಯಲ್ಲಿ ನಾನು ಪಕ್ಷಗಾರನಲ್ಲ ಎಂದರೆ ಸರಿಯಲ್ಲ. ನೀವು ಈ ಪ್ರಕರಣದಲ್ಲಿ ೬ನೇ ಪ್ರತಿವಾದಿ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೀರಾ ಎಂದರೆ ಸಾಕ್ಷಿಯು ತಾನು ಚೆನ್ನಪ್ಪನ ಮಗ ಎಂದು ಹೇಳಿರುತ್ತಾರೆ. ೬ನೇ ಪ್ರತಿವಾದಿ ಚೆನ್ನಾಗಿದ್ದಾರೆ ಎಂದರೆ ಸರಿಯಲ್ಲ. ಮೊದಲು ಈ ಪ್ರಕರಣದಲ್ಲಿ ೬ನೇ ಪ್ರತಿವಾದಿ ಹಾಜರಾಗಿ ವಕೀಲರನ್ನು ನೇಮಿಸಿ ಹೋಗಿದ್ದಾರೆ ಎಂದರೆ ಸರಿ. ಅದೇ ರೀತಿ ನ್ಯಾಯಾಲಯಕ್ಕೆ ಹಾಜಾರಾಗಿ ಪ್ರಮಾಣ ಪತ್ರವನ್ನು ಹಾಕಿ, ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿ. ೬ನೇ ಪ್ರತಿವಾದಿ ಚೆನ್ನಾಗಿದ್ದರು ಸಹ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯ ಹೇಳುತ್ತಾರೆಂದು ಅದನ್ನು ಮರೆ ಮಾಚುವ ಸಲುವಾಗಿ ನಾನು ವಿಶೇಷ ಮುಕ್ತಿಯಾರ ಪತ್ರ ಪಡೆದುಕೊಂಡು, ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ೬ನೇ ಪ್ರತಿವಾದಿ ಅನಾರೋಗ್ಯದಿಂದಿರುವ ಕುರಿತು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅವರು ಅನಾರೋಗ್ಯದಿಂದ ಇಲ್ಲದಿದ್ದರು ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚೆನ್ನಪ್ಪ ಅವರ ತಂದೆ ಹೆಸರು ಮುತ್ತಣ್ಣ. ಮುತ್ತಣ್ಣ ಇವರಿಗೆ ೪ ಜನ ಮಕ್ಕಳು, ಅವರೆಂದರೆ ದೊಡ್ಡಚೆನ್ನಮ್ಮ, ಚಿಕ್ಕಚೆನ್ನಮ್ಮ, ಚೆನ್ನಪ್ಪ, ಗೌರಮ್ಮ. ದೊಡ್ಡಚೆನ್ನಮ್ಮ ಇವರಿಗೆ ಮಕ್ಕಳು ಇಲ್ಲ ಮತ್ತು ಅವರು ಮೃತ ಆಗಿರುತ್ತಾರೆ ಎಂದರೆ ಸರಿ. ಚಿಕ್ಕಚೆನ್ನಮ್ಮ ಅವರು ಮರಣ ಹೊಂದಿದ್ದಾರೆ ಎಂದರೆ ಸರಿ. ೧ ರಿಂದ ೫ನೇ ಪ್ರತಿವಾದಿಯರು ಚಿಕ್ಕಚೆನ್ನಮ್ಮನವರ ಮಕ್ಕಳು ಎಂದರೆ ಸರಿ. ಮುತ್ತಣ್ಣ ಅವರ ಮಗ ಚೆನ್ನಪ್ಪ , ೬ನೇ ಪ್ರತಿವಾದಿ ಎಂದರೆ ಸರಿ. ಗೌರಮ್ಮ ಇವರು ಪ್ರಕರಣದ ವಾದಿ ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂ.೧೬೫ ಇದು ೨ ಎಕರೆ ಒಂದು ಗುಂಟೆ ವಿಸ್ತೀರ್ಣ ಇರುತ್ತದೆ. ಅದು ಮೂಲ ಹನುಮಂತಪ್ಪ ಅವರಿಗೆ ಸೇರಿದ್ದು. ಹನುಮಂತಪ್ಪ ಇವರು ೬ನೇ ಪ್ರತಿವಾದಿಯ ದೊಡ್ಡಪ್ಪ. ಸರ್ವೆ ನಂ.೧೬೫ ಆಸ್ತಿಯನ್ನು ನಮ್ಮ ತಂದೆ ಹನುಮಂತಪ್ಪರವರಿಂದ ೨ ಎಕರೆ ೧ ಗುಂಟೆಯನ್ನು ಕ್ರಯಕ್ಕೆ ಪಡೆದಿದ್ದಾರೆ. ಈಗ ಸುಮಾರು ೬೦ ವರ್ಷದ ಹಿಂದೆ ಕ್ರಯಕ್ಕೆ ಪಡೆದಿರುತ್ತಾರೆ. ಅದು ನೊಂದಣಿ ಆಗಿಲ್ಲ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದನ್ನು ಬ್ಯಾಂಕಿಗೆ ಕೊಟ್ಟಿರುತ್ತೇವೆ ಎಂದು ಹೇಳಿರುತ್ತಾರೆ. ಸರ್ವೆ ನಂ.೧೬೫ ಆಸ್ತಿಯ ಒಟ್ಟು ವಿಸ್ತೀರ್ಣ ೨ ಎಕರೆ ಒಂದು ಗುಂಟೆ ಇರುತ್ತದೆ.

ಸರ್ವೆ ನಂ.೧೬೫ ಒಟ್ಟು ೪ ಎಕರೆ ೨ ಗುಂಟೆ ಮುಗಬಾಳ ಗ್ರಾಮದಲ್ಲಿದೆ ಎಂದರೆ ಸರಿ. ಸದರಿ ಆಸ್ತಿ ಮುತ್ತಣ್ಣ ಇವರಿಗೆ ಪಿತ್ರಾರ್ಜಿತ ವಾಗಿ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವರ್ಯಾಜಿತ ಆಸ್ತಿ ಎಂದು ಹೇಳಿರುತ್ತಾರೆ. ಸದರಿ ಆಸ್ತಿ ಚೆನ್ನಪ್ಪ ಇವರಿಗೆ ಪೌಹತಿ ಖಾತೆಯಂತೆ ಬಂದಿರುತ್ತದೆ. ಎಂ.ಆರ್.ನಂ.೨೪/೮೮-೮೯ ರಂತೆ ಪೌಹತಿ ಖಾತೆಯಂತೆ ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿ ಮುತ್ತಣ್ಣ ಅವರಿಗೆ ಪಿತ್ರಾರ್ಜಿತವಾಗಿ ಬಂದಿದ್ದು, ಚೆನ್ನಪ್ಪ ಇವರು ಕ್ರಯಕ್ಕೆ ಪಡೆದಿದ್ದು ಅಲ್ಲ ಎಂದರೆ ಸರಿಯಲ್ಲ. ಚೆನ್ನಪ್ಪ ಅವರು ಈ ಎಲ್ಲಾ ಆಸ್ತಿ ತನ್ನದೆಂದು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ. ಅವರ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಗೊತ್ತಿದೆ.

ಚೆನ್ನಪ್ಪ ಇವರು ತಮ್ಮ ಪ್ರತಿವಾದ ಪತ್ರ ಮತ್ತು ಸಾಕ್ಷಿಯ ಪ್ರಮಾಣ ಪತ್ರದಲ್ಲಿ ಸರ್ವೆ ನಂ. ೧೬೫ ಪಿತ್ರಾರ್ಜಿತ ಆಸ್ತಿ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಗೊತ್ತಿದೆ. ನನ್ನ ಪ್ರಮಾಣ ಪತ್ರದಲ್ಲೂ ಕೂಡ ಪ್ಯಾರಾನಂ.೬ರಲ್ಲಿ ಸದರಿ ಆಸ್ತಿ ಪಿತ್ರಾರ್ಜಿತ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ಸಲ್ಲಿಸಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನನ್ನ ತಂದೆ ಹೇಳಿ ಬರೆಸಿದ್ದಾರೆ. ನನ್ನ ಪ್ರಮಾಣ ಪತ್ರದಲ್ಲಿ ಸರ್ವೆ ನಂ. ೧೬೫ ಪಿತ್ರಾರ್ಜಿತ ಆಸ್ತಿ ಎಂದು ಬರೆದಿದ್ದು ಸರಿಯಿದೆ. ಸದರಿ ಆಸ್ತಿ ಪಿತ್ರಾರ್ಜಿತವಾಗಿ ಬಂದಿದ್ದರು ಸಹ ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸ್ವಯಾರ್ಜಿತ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಚೆನ್ನಪ್ಪ ಇವರ ಸ್ವಯಾರ್ಜಿತ ಆಗದೇ ಇದ್ದರೂ, ಮತ್ತು ಆ ರೀತಿ ದಾಖಲೆಗಳನ್ನು ನೀಡದೇ ಇದ್ದರು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಐಟಂ ನಂ.೨, ೨ನೇ ಆಸ್ತಿ ಚೆನ್ನಪ್ಪನ ಹೆಸರಿನಲ್ಲಿದೆ. ಅದು ಕೂಡ ಚೆನ್ನಪ್ಪ ಇವರ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ. ೩೦ ವರ್ಷದ ಹಿಂದೆ ಕ್ರಯ ಪತ್ರ ಆಗಿರುತ್ತದೆ. ೨೦.೦೨.೧೯೬೫ ರಂದು ಸದರಿ ಆಸ್ತಿ ಒಟ್ಟು ಕುಟುಂಬದ ಮೇರೆಗೆ ಚೆನ್ನಪ್ಪ ಇವರ ಹೆಸರಿಗೆ ಕ್ರಯ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿ ಮತ್ತು ೧ ರಿಂದ ೫ನೇ ಪ್ರತಿವಾದಿಯರು ಸೇರಿ ಅವರ ದುಡಿಮೆಯಿಂದ ಕ್ರಯಕ್ಕೆ ಪಡೆದಿರುವ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ ಚೆನ್ನಪ್ಪ ಇವರು ಹಿರಿಯ ಮಗನಾಗಿದ್ದರಿಂದ ಆತನ ಹೆಸರಿನಲ್ಲಿ ಕ್ರಯ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಚೆನ್ನಪ್ಪ ಇವರಿಗೆ ಯಾವುದೇ ವೈಯಕ್ತಿಕ ವರಮಾಣ ಇಲ್ಲದಿದ್ದರು, ಒಟ್ಟು ಕುಟುಂಬದ ಆಸ್ತಿ ಅವರ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ ಕ್ರಯಕ್ಕೆ ಪಡೆದಿದ್ದರು ಸಹ, ಅವರಿಗೆ ಭಾಗಕೊಡಬೇಕಾಗುತ್ತದೆಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುತ್ತಣ್ಣ ಅವರಿಗೆ ಸೇರಿದ ಮುಗಬಾಳ ಗ್ರಾಮದಲ್ಲಿ ಯಾವುದೇ ಆಸ್ತಿಯಿಲ್ಲ. ನಾವು ವಾಸಿಸುತ್ತಿರುವ ಮನೆ ನಮ್ಮ ತಂದೆ ಅವರಿಗೆ ಸೇರಿರುತ್ತದೆ. ಅದರ ನಂ.೧೦/೩ ಎಂದು ಇರುತ್ತದೆ. ದಾವಾ ಆಸ್ತಿ ಐಟಂ ನಾಲ್ಕನೇ ಆಸ್ತಿ ನಮ್ಮ ತಂದೆಯದ್ದು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ಆಸ್ತಿ ನಮ್ಮ ತಂದೆ ಹೆಸರಿನಲ್ಲಿದೇ. ಅದನ್ನು ದೊಡ್ಡಚೆನ್ನಪ್ಪ ರವರಿಂದ ನಮ್ಮ ತಂದೆ ಕ್ರಯಕ್ಕೆ ಪಡೆದಿದ್ದಾರೆ. ನಮ್ಮ ತಂದೆ ಮತ್ತು ದೊಡ್ಡ ಚೆನ್ನಪ್ಪ ಇವರಿಗೆ ಯಾವುದೇ ಸಂಬಂಧ ಇಲ್ಲ. ಆ ಕುರಿತು ಕ್ರಯ ಪತ್ರ ಇದೆ. ಅದನ್ನು ಹಾಜುರಪಡಿಸಲು ಯಾವುದೇ ತೊಂದರೆ ಇಲ್ಲ, ಕಾಲವಕಾಶ ನೀಡಿದರೆ ತಂದು ಕೊಡುತ್ತೇನೆ. ಕಾಲವಕಾಶ ಮುಗಿದಿದೆ ಆ ದಾಖಲೆ ನನ್ನ ಬಳಿ ಇಲ್ಲದೇ ಇರುವುದರಿಂದ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮುಗಬಾಳ ಗ್ರಾಮದಲ್ಲಿ ಗ್ರಾಮಾ ಠಾಣಾ ವ್ಯಾಪ್ತಿಯಲ್ಲಿ ಆಸ್ತಿ ಒಂದೇ ಇದ್ದು, ಅದರಲ್ಲಿ ಚೆನ್ನಪ್ಪ ರವರು ವಾಸಿಸುತ್ತಿದ್ದು, ಅದು ಮುತ್ತಣ್ಣ ಅವರ ಕಡೆಯಿಂದ ಬಂದಿದ್ದು ಎಂದರೆ ಸರಿಯಲ್ಲ. ಚಿಕ್ಕಚೆನ್ನಮ್ಮ ಮತ್ತು ದೊಡ್ಡ ಚೆನ್ನಮ್ಮ ಇವರು ಮೃತರಾಗಿದ್ದು, ಈ ಪ್ರಕರಣದ ವಾದಿ ಗೌರಮ್ಮ ಇವರು ಮದುವೆಯಾಗಿ ಗಂಡನ ಮನೆಯಲ್ಲಿ ಇರುವುದರಿಂದ , ಈಗ ಸದ್ಯ ಚೆನ್ನಪ್ಪರವರು ಆ ಮನೆಯಲ್ಲಿ ವಾಸ್ತವ್ಯ ಇದ್ದಾರೆ ಎಂದರೆ ಸಾಕ್ಷಿಯು ತಾವೆ ಸ್ವಾಧೀನದಲ್ಲಿದ್ದೇವೆ ಎನ್ನುತ್ತಾರೆ. ಸದರಿ ಆಸ್ತಿ ಮುತ್ತಣ್ಣ ಅವರ ಆಸ್ತಿ ಆಗಿದ್ದರಿಂದ ಚೆನ್ನಪ್ಪ ಮತ್ತು ಅವರ ಸಹೋದರಿಯರಿಗೆ ಕೂಡ ಹಕ್ಕು ಇದ್ದು, ಅದನ್ನು ತಪ್ಪಿಸಲು ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿದ್ದರು ಸಹ ನಾನು ಸ್ವಯಾರ್ಜಿತ ಆಸ್ತಿಗಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆನ್ನಪ್ಪ ಅವರಿಗೆ ಯಾವುದೇ ವೈಯಕ್ತಿಕ ವರಮಾಣ ಇರಲಿಲ್ಲ, ಹಾಗಾಗಿ ಅವರು ಯಾವುದೇ ಆಸ್ತಿಗಳನ್ನು ಕ್ರಯಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ವ್ಯಾಪಾರ ಮಾಡುತ್ತಿದ್ದರು ಅದರಿಂದ ಪಡೆದಿದ್ದರು ಎಂದು ಹೇಳುತ್ತಾರೆ. ನನ್ನ ಜನ್ಮ ದಿನಾಂಕ ೨೪.೧೦.೧೯೭೬. ನಾನು ಹುಟ್ಟುವ ಪೂರ್ವದಲ್ಲಿ ನಡೆದಿರುವ ವ್ಯವಹಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ೧೯೬೫ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲದಿದ್ದರು, ಚೆನ್ನಪ್ಪ ಇವರು ಸದರಿ ಆಸ್ತಿಗಳನ್ನು ಕ್ರಯಕ್ಕೆ ಪಡೆದಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳು ೨೦೧೬-೧೭ನೇ ಸಾಲಿನ ನಂತರದ್ದು ಇದೆ ಎಂದರೆ ಸರಿ. ಅದರಿಂದ ಹಿಂದಿನ ಪಹಣಿ ಪತ್ರಿಕೆಯಲ್ಲಿ ಚೆನ್ನಪ್ಪ ಅವರ ಹೆಸರಿಗೆ ಜಂಟಿ ಪೌಹತಿ ಖಾತೆ ಎಂದು ತೋರಿಸಿದ್ದು, ಅದನ್ನು ಮರೆ ಮಾಚುವ ಸಲುವಾಗಿ , ಉದ್ದೇಶ ಪೂರಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಚೆನ್ನಪ್ಪ ಇವರಿಗೆ ಯಾವುದೇ ಅನಾರೋಗ್ಯ ಇಲ್ಲದಿದ್ದರು, ನಿ.ಡಿ.೧೯ ವಿಶೇಷ ಮುಕ್ತಿಯಾರ ಪತ್ರವನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯಾ ಪ್ರಮಾಣ ಪತ್ರವನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ಮುತ್ತಣ್ಣ ಇವರ ಎಲ್ಲಾ ಮಕ್ಕಳಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ಈಗ ನನಗೆ ೪೨ ವರ್ಷ ವಯಸ್ಸು. ನನ್ನ ಪ್ರಮಾಣ ಪತ್ರದಲ್ಲಿ ೪೮ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಚೆನ್ನಪ್ಪ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಹೊರಬರುತ್ತದೆ ಎಂದು, ಮತ್ತು ಬೇರೆಯವರಿಗೆ ಭಾಗ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆನ್ನಪ್ಪ ಇವರು ದಾವಾ ಆಸ್ತಿ ೩ನೇ ಐಟಂ ಆಸ್ತಿಯು ಪಿತ್ರಾರ್ಜಿತ ಆಸ್ತಿ ಆಗಿದ್ದರು ಸಹ ೭ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಕ್ಕೆ ದೊಡ್ಡಚೆನ್ನಮ್ಮ, ಚಿಕ್ಕಚೆನ್ನಮ್ಮ ಮತ್ತು ವಾದಿಯ ಸಹಿ ಇಲ್ಲ ಎಂದರೆ ಸರಿ. ಚೆನ್ನಪ್ಪ ಇವರು ಪಿತ್ರಾರ್ಜಿತ ಆಸ್ತಿಯನ್ನು ಮಾರಾಟಮಾಡಿ ಬೇರೆಯವರಿಗೆ ಮೋಸ ಮಾಡಿದ್ದಾರೆ ಎಂದರೆ ಸರಿಯಲ್ಲ.
**( ಈ ಹಂತದಲ್ಲಿ ೧ ರಿಂದ ೫ನೇ ಪ್ರತಿವಾದಿಗಳು ಶ್ರೀ ಎ.ಪಿ.ಆರ್. ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**